

ಸರಬರಾಜು ಕಾರ್ಯ ಎಲ್ಲಾ ಭಾಗಗಳಿಗೂ ಸಲೀಸಾಗಿ ತಲುಪುತ್ತಿತ್ತು ಎಂದು ನನಗೆ ಹಲವು ಬಾರಿ ಅನಿಸಿದ್ದಿದೆ. ಆದರೆ ತುಘಲಕ್ ದೊರೆ ರಾಜಧಾನಿ ಸ್ಥಳಾಂತರ ಮಾಡುವಂತೆ ದೇಹದ ಅಂಗಾಂಗಗಳನ್ನು ಸ್ಥಳಾಂತರಿಸುವ ವೈದ್ಯಕೀಯ ತಂತ್ರಜ್ಞಾನವಿನ್ನೂ ವಿಕಾಸ ಹೊಂದಬೇಕಿದೆ. ಸದ್ಯಕ್ಕೆ ಪಾದವನ್ನು ಮೇಲ್ಮುಖವಾಗಿಯೂ, ಕೆಳಮುಖವಾಗಿಯೂ ಆಡಿಸುವ ಸಿದ್ಧಾಸನ, ಪದ್ಮಾಸನ, ಮುಕ್ತಾಸನಗಳ ಮುಖೇನ ಈ ಸಮಸ್ಯೆಯಿಂದ ಮುಕ್ತಿ ಪಡೆದು ಉತ್ತಮ ಆರೋಗ್ಯವನ್ನು ಸಿದ್ಧಿಸಿಕೊಳ್ಳಬಹುದು.

ದೇಹದ ಸಮತೋಲನವನ್ನು ಕಾಪಾಡುವಲ್ಲಿ ಪಾದಗಳ ಪಾತ್ರ ಹಿರಿದು. ಕಟ್ಟಡದ ಭದ್ರತೆ ಅದರ ಅಡಿಪಾಯದಲ್ಲಿರುವಂತೆ ಪಾದಗಳು ಅಗಲವಾಗಿಯೂ ಸದೃಢವಾಗಿಯೂ ಇದ್ದಾಗ ಬಾಡಿ ಬ್ಯಾಲೆನ್ಸ್ ಸಲೀಸು. ಪಾದದ ಅಳತೆ ಹಿರಿದಾಗಿದ್ದರೆ ಹೆಚ್ಚು ಸಂಪತ್ತು ಲಭಿಸುವುದೆಂಬ ನಂಬಿಕೆಯಿದೆ. ಮೂರು ಲೋಕವನ್ನೂ ಕವರ್ ಮಾಡಿದ ವಾಮನನ ಬೃಹತ್ ಫೂಟೇ ಈ ಥಾಟ್‌ಗೆ ಕಾರಣವಿರಬಹುದು. ಆದರೆ ಚೀನಾ ಮಂದಿಗೆ ಅಗಲವಾದ ಪಾದಗಳು ಅಪಥ್ಯ. ಹಾಗಾಗಿ ಹಸುಳೆಗಳ ಪಾದಗಳಿಗೆ ಬಿಗಿಯಾದ ಶೂ ಏರಿಸಿ ಅವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವರು. ಸೀಮಿತ ಚೌಕಟ್ಟಿನೊಳಗೇ ಬೇರೂರುವ ಬೋನ್ಸಾಯ್‌ಗಳಂತೆ ಬೂಟಿನ ಅಚ್ಚಿನೊಳಗೇ ಮಿನಿ ಪಾದಗಳು ರೂಪುಗೊಳ್ಳುವವು. ಆದರೆ ಇವೇ ಮಿನಿಯೇಚರ್‌ಗಳು ಒಲಿಂಪಿಕ್ಸ್‌ನೆಡೆಗೆ ಪಾದ ಬೆಳೆಸಿದಾಗ ಗಮನಾರ್ಹ ಪ್ರದರ್ಶನ ನೀಡುವ ಮೂಲಕ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂದು ನಿರೂಪಿಸಿಬಿಡುವವು.

ಪಾದಗಳ ಸೌಂದರ್ಯ ವರ್ಧಿಸುವ ಪೆಡಿಕ್ಯೂರ್ ಚಿಕಿತ್ಸೆ ಎಲ್ಲಾ ರೂಪಾಲಯಗಳಲ್ಲೂ ದೊರೆಯುವುದು. ಟಬ್‌ನೊಳಗೆ ಪಾದವನ್ನು ಮುಳುಗಿಸಿ ಉಜ್ಜಿ, ತಿಕ್ಕಿ, ತೊಳೆದು ಉಗುರುಗಳಿಗೆ ಆಕಾರ ನೀಡಿ ಬಣ್ಣ ಬಳಿಯುವ ಬ್ಯೂಟಿಶಿಯನ್‌ಗಳಿರುವರು. ಆರಂಭಿಕ ಹಂತದಲ್ಲಿ ಇವರಿಗೆ ಸಹಾಯ ಮಾಡಲು ಮತ್ಸ್ಯಕನ್ಯೆಯರೂ ಜೊತೆಯಾಗುವರು. ಪಾದಗಳ ನಿರ್ಜೀವಕೋಶಗಳ ಪೀ (ಮೀ)ಲ್ ಮಾಡುವ ಮತ್ಸ್ಯಗಳ ಈ ಕಾರ್ಯ 'ಫಿಶ್ ಪೆಡಿಕ್ಯೂರ್' ಎಂದು ಎಲ್ಲೆಡೆ ಪ್ರಸಿದ್ಧ. ವರ್ಣಭೇದ ನೀತಿಗೆ ಪಾದಗಳೂ ಹೊರತಾಗಿಲ್ಲ ಎನ್ನುವುದಕ್ಕೆ ಕಿವಿ, ಕತ್ತು, ಕೈಗಳನ್ನಲಂಕರಿಸುವ ದುಬಾರಿ ಹಳದಿ ಲೋಹ ಗ್ರೌಂಡ್ ಫ್ಲೋರಿಗೆ ಇಳಿಯಲು ಆಸಕ್ತಿ ತೋರದು. ಹಾಗಾಗಿ ಬಿಳಿಯ ಲೋಹದಿಂದಷ್ಟೇ ಹೆಚ್ಚಾಗಿ ರೂಪುಗೊಳ್ಳುವ ಕಾಲುಂಗುರ, ಗೆಜ್ಜೆ, ಕಾಲಂದಿಗೆಯಂತಹ ಪಾದಾಭರಣಗಳು ಪಾದವನ್ನು ಅಲಂಕರಿಸುತ್ತವೆ.

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಹಿಂದೆ ಗುರುಗಳ ಪದತಳದಿ ಶಿರವಿರಿಸಿ ಅವರ ಆದೇಶಗಳನ್ನು ಶಿರಸಾವಹಿಸುವ ಪದ್ಧತಿ ಇತ್ತು. ಲಿಂಗದ ಮೇಲೆ ನೀರೆರೆದು ಅದರ ಬುಡದಲ್ಲಿ ಹರಿದು ಬರುವ ನೀರನ್ನೂ, ಗುರುವಿನ ಪಾದವನ್ನು ತೊಳೆದ ನೀರನ್ನೂ ಪಾದೋದಕವೆಂದು ಕುಡಿಯುವ ಪದ್ಧತಿ ಇಂದು ಹಲವು ವೈಚಾರಿಕ ಚಿಂತಕರ ಟೀಕೆಗೆ ಗುರಿಯಾಗಿದೆ. 'ನಾ ನಿನ್ನ ಪಾದದ ದೂಳಾದರೂ ಚೆನ್ನ... ಸ್ವೀಕರಿಸೋ ನನ್ನ' ಎಂದು ಭಕ್ತರು ಭಗವಂತನನ್ನು ಬೇಡಿದಂತೆ ಸದನದಲ್ಲಿ ತಮ್ಮ ಪಾದ ಊರಿ ನೆಲೆಗೊಳ್ಳಲು ಸಂಬಂಧಪಟ್ಟವರ ಕಾಲಿಗೆ ಸಿಲುಕುತ್ತಾ ಹಲುಬುವ ಹಲವು ಆಕಾಂಕ್ಷಿಗಳಿರುವರು.

ಶ್ರೀಕೃಷ್ಣ ಜನ್ಮಾಷ್ಟಮಿಯಂದು ಭಗವಂತನ ಪಾದದ ಗುರುತನ್ನು ಮುಂಬಾಗಿಲಿನಿಂದ ಪೂಜಾಗೃಹದವರೆಗೂ ಮೂಡಿಸಿ, ಉಂಡೆ ಚಕ್ಕುಲಿಗಳ ನೈವೇದ್ಯ ಸಮರ್ಪಿಸಿದರೆ ನವ ವಿವಾಹಿತೆಯರು ಲಕ್ಷ್ಮೀ ಸ್ವರೂಪಿಗಳಾಗಿ ಹೊಸ್ತಿಲಿನ ಪಡಿ ಉರುಳಿಸಿ ಕುಂಕುಮ ಬೆರೆತ ತಮ್ಮ ಪಾದಗಳನ್ನು ಮುದ್ರಿಸುತ್ತಾ ರ್‍ಯಾಂಪ್ ವಾಕ್‌ನೊಂದಿಗೆ ಒಳಗಡಿಯಿರಿಸಿ ಮುಂದಿನ ದಿನಗಳಲ್ಲಿ ಅವರದೇ ಹವಾ ಎಂಬ ಮುನ್ಸೂಚನೆ ನೀಡುವರು.

ಕಷ್ಟ ಬಂದಾಗ ಕತ್ತೆ ಕಾಲು ಹಿಡಿಯುವುದು ಅನಿವಾರ್ಯವೆಂಬಂತೆ ಕೆಲವು ಬಾರಿ ಕೆಲಸವಾಗಬೇಕೆಂದರೆ ಬೂಟು ಬಿಚ್ಚೆ ಇಷ್ಟವಿಲ್ಲದವರ ಫೂಟು ಹಿಡಿಯುವ ಪರಿಸ್ಥಿತಿ ಎದುರಾಗುವುದು. ಮೇಲೇರಿದ ನಂತರ ಹತ್ತಲು ಅನುವು ಮಾಡಿದ ಏಣಿಯನ್ನು ಒದೆಯುವಂತೆ ಕೆಲಸವಾದ ನಂತರ ಹಿಡಿದವರ ಕಾಲನ್ನೇ ಎಳೆದು ಬೀಳಿಸುವುದೂ ಸರ್ವೇ ಸಾಮಾನ್ಯ. ಶಿರದಲ್ಲಿರುವ ನಯನಗಳು ಹಲವು ಬಾರಿ ವ್ಯಾಪ್ತಿ ಪ್ರದೇಶದ ಹೊರಗುಳಿದು ದೂರದ ಪಾದಗಳು ರಾಂಗ್ ರೂಟ್ ತಲುಪುವುದಿದೆ. ಪಾದದಲ್ಲೇ ನಯನವನ್ನು ಹೊಂದಿದ್ದ ಭೃಗು ಮಹರ್ಷಿ ವಿಷ್ಣುವಿನ ಗುಂಡಿಗೆಗೆ ಫುಟ್ ಸ್ಟ್ರೋಕ್ ನೀಡಿ ಆ ಪಾದಕ್ಕೆ ಅಟ್ಯಾಚ್ ಆಗಿದ್ದ ಹೆಚ್ಚುವರಿ ಅಕ್ಷಿಗೆ ಸಂಚಕಾರ ತಂದುಕೊಂಡ.

ಕರ ಮುಗಿದು ಬೇಡಿದರೆ ಸಕಲವನ್ನೂ ಕರುಣಿಸುವ ಕಲ್ಪತರುವಿನಂತೆ, ಭಕ್ತಿಯಿಂದ ಬೇಡಿದ್ದನ್ನು ಅನುಗ್ರಹಿಸುವ 'ಬಿಗ್ ಫೂಟ್' ಒಂದು ಗೋವಾ ಮ್ಯೂಸಿಯಂನ ಪ್ರಮುಖ ಆಕರ್ಷಣೆಯಾಗಿದೆ. ಫೂಟನ್ನೇ ಬಳಸಿ ಆಡುವ ಆಟ ಫುಟ್‌ಬಾಲ್ ಹಲವು ದೇಶಗಳ ರಾಷ್ಟ್ರೀಯ ಕ್ರೀಡೆ. ಗೋಲ್ ಹೊಡೆಯುವ ಸಮಯ ಪಾದರಸದಂತೆ ಚಲಿಸುವ ಆಟಗಾರರ ಪಾದದೆಡೆಗೆ ನೋಟ ಹರಿಸುವ ಕ್ರೀಡಾಪ್ರೇಮಿಗಳು ಉಸಿರು ಬಿಗಿಹಿಡಿದು ತಲ್ಲೀನರಾಗಿಬಿಡುವರು.

'ಅಣ್ಣಾ ನಿನ್ನ ಪಾದದ ಜೆರಾಕ್ಸ್ ಕೊಟ್ರೆ ಅದುಕ್ಕೆ ಫ್ರೇಮ್ ಹಾಕುಸ್ಕೊಂಡು ದಿನಾ ಪೂಜೆ ಮಾಡ್ತೀವಿ' ಎಂದು ಪ್ರಚಂಡರ ಪ್ರಾವೀಣ್ಯಕ್ಕೆ ಕೈ ಮುಗಿದು ಕುಹಕವಾಡುವ ಅಭ್ಯಾಸವೂ ಇದೆ. ಇದಕ್ಕೆ ವ್ಯತಿರಿಕ್ತವಾಗಿ, ಬಾಳ ಪಯಣದಲಿ ಅರ್ಥಪೂರ್ಣವಾಗಿ ಬದುಕಿದವರ ಹೆಜ್ಜೆ ಗುರುತುಗಳು ಹಲವರ ಮನದಿ ಛಾಪು ಮೂಡಿಸಿ ಸಾರ್ಥಕತೆ ತಂದುಕೊಡುವುದೂ ಇದೆ.

ಪ್ರತಿಕ್ರಿಯಿಸಿ: **feedback@sudha.co.in**